ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 136-141
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕರಾವಳಿ ಕರ್ನಾಟಕ ಮತ್ತು ಗಾಂಧಿ

**ನವ್ಯಶ್ರೀ ಎಸ್**
ಸಂಶೋಧನಾ ವಿದ್ಯಾರ್ಥಿ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ, ಮಂಗಳೂರು

***Abstract:***

*ಕರಾವಳಿ ಕರ್ನಾಟಕದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಮಹಾತ್ಮ ಗಾಂಧೀಜಿಯವರ ಚಿಂತನೆಗಳು ಮಹತ್ವದ ಪ್ರಭಾವ ಬೀರಿವೆ. ಸತ್ಯ, ಅಹಿಂಸೆ, ಸ್ವದೇಶಿ, ಖಾದಿ ಮತ್ತು ಅಸಹಕಾರ ಚಳವಳಿಯ ಮೂಲಕ ಜನರಲ್ಲಿ ಸ್ವಾತಂತ್ರ್ಯ ಹೋರಾಟದ ಜಾಗೃತಿಯನ್ನು ಮೂಡಿಸಲು ಗಾಂಧೀಜಿಯವರು ಪ್ರೇರಣೆ ನೀಡಿದರು. ಕರಾವಳಿ ಪ್ರದೇಶದಲ್ಲಿ ರಾಷ್ಟ್ರೀಯ ಚಳವಳಿಯ ಬೆಳವಣಿಗೆ, ಜನಸಾಮಾನ್ಯರ ಭಾಗವಹಿಸುವಿಕೆ ಮತ್ತು ಸಾಮಾಜಿಕ ಸುಧಾರಣೆಯ ಪ್ರಯತ್ನಗಳಲ್ಲಿ ಗಾಂಧೀವಾದಿ ತತ್ವಗಳು ಪ್ರಮುಖ ಪಾತ್ರ ವಹಿಸಿದವು. ಗಾಂಧೀಜಿಯವರ ವಿಚಾರಗಳು ಗ್ರಾಮೀಣ ಅಭಿವೃದ್ಧಿ, ಅಸ್ಪೃಶ್ಯತಾ ನಿವಾರಣೆ, ಮಹಿಳಾ ಸಬಲೀಕರಣ ಮತ್ತು ಸ್ವಾವಲಂಬನೆಯ ಮಹತ್ವವನ್ನು ಜನರಿಗೆ ತಿಳಿಸಿಕೊಟ್ಟವು. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಗಾಂಧಿಯವರ ನೇತೃತ್ವದಲ್ಲಿ ಬ್ರಿಟಿಷ್ ಸರಕಾರದ ವಿರುದ್ಧ ದೇಶದಾದ್ಯಂತ ಅನೇಕ ಅಹಿಂಸಾತ್ಮಕ ಚಳವಳಿಗಳು ನಡೆದವು. ಈ ರಾಷ್ಟ್ರೀಯ ಹೋರಾಟದಿಂದ ಸ್ಫೂರ್ತಿ ಪಡೆದು ಅನೇಕ ಕತೆ–ಕಾದಂಬರಿ, ನಾಟಕ ಕವಿತೆಗಳು ಹುಟ್ಟಿಕೊಂಡವು. ಒಟ್ಟಿನಲ್ಲಿ ದೇಶದ ಪೂರ್ಣ ಪ್ರಮಾಣದ ಪ್ರಗತಿಯನ್ನೂ ಎಲ್ಲಾ ನೆಲೆಯ ಸಮಾಜ ಸುಧಾರಣೆಯನ್ನೂ ಮುನ್ನೆಲೆಯಲ್ಲಿ ಇಟ್ಟುಕೊಂಡು ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಗಾಂಧಿಯವರ ವ್ಯಕ್ತಿತ್ವ ಕರಾವಳಿ ಕರ್ನಾಟಕದ ಮೇಲೆ ಬೀರಿದಂತಹ ಪ್ರಭಾವವನ್ನು ಹಿನ್ನೆಲೆಯಾಗಿರಿಸಿಕೊಂಡ ಗಾಂಧಿ ಬಂದ, ಹಾಗೂ ಉಲ್ಲಂಘನೆ ಈ ಎರಡು ಕಾದಂಬರಿಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗುವುದು.*

***Keywords:*** *ಕನ್ನಡ ಸಾಹಿತ್ಯ, ಗಾಂಧಿ ಬಂದ, ಉಲ್ಲಂಘನೆ, ಕರಾವಳಿ ಕರ್ನಾಟಕ, ಮಹಾತ್ಮ ಗಾಂಧೀಜಿ, ಸ್ವಾತಂತ್ರ್ಯ ಚಳವಳಿ, ಗಾಂಧೀವಾದ, ಸಾಮಾಜಿಕ ಸುಧಾರಣೆ.*

## ಪೀಠಿಕೆ

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಗಾಂಧಿಯವರ ನೇತೃತ್ವದಲ್ಲಿ ಬ್ರಿಟಿಷ್ ಸರಕಾರದ ವಿರುದ್ಧ ದೇಶದಾದ್ಯಂತ ಅನೇಕ ಅಹಿಂಸಾತ್ಮಕ ಚಳವಳಿಗಳು ನಡೆದವು. ಈ ರಾಷ್ಟ್ರೀಯ ಹೋರಾಟದಿಂದ ಸ್ಫೂರ್ತಿ ಪಡೆದು ಅನೇಕ ಕತೆ–ಕಾದಂಬರಿ, ನಾಟಕ ಕವಿತೆಗಳು ಹುಟ್ಟಿಕೊಂಡವು. ಅಂದರೆ ಸಾಹಿತಿಗಳು ತಮ್ಮ ಹೋರಾಟದ ಮನೋಧರ್ಮದ ಪ್ರಕಟಣೆಗೆ ಸಾಹಿತ್ಯವನ್ನು ಸಾಧನವನ್ನಾಗಿ ರೂಪಿಸಿಕೊಂಡರು. ಗಾಂಧಿಯುಗದಲ್ಲಿ ಇದ್ದಂತಹ ಲೇಖಕರು ಗಾಂಧಿಯವರೊಡನೆ ಸ್ವಾತಂತ್ರ್ಯ ಚಳುವಳಿಯಲ್ಲಿ ನೇರವಾಗಿ ಧುಮುಕಿದವರು. ಹೀಗೆ ತಾವು ಕಂಡುಂಡಂತಹ

***Please cite this article as:*** ನವ್ಯಶ್ರೀ, ಎಸ್. (2026). ಕರಾವಳಿ ಕರ್ನಾಟಕ ಮತ್ತು ಗಾಂಧಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(4), 136–141

ಹೋರಾಟದ ಅನುಭವಕ್ಕೆ ಕಲಾತ್ಮಕವಾದ ಅಭಿವ್ಯಕ್ತಿಯನ್ನು ಸೃಜನಶೀಲ ಸಾಹಿತ್ಯ ಪ್ರಕಾರಗಳ ಮೂಲಕ ನೀಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಕೇಳಿಬರುತ್ತಿದ್ದ ಜನತೆಯ ಕೂಗು ಹಾಗೂ ಹೋರಾಟಗಳನ್ನು ಅಭಿವ್ಯಕ್ತಿಸುವಲ್ಲಿ ಕಾದಂಬರಿ ಪ್ರಕಾರ ವಿಶೇಷವಾದ ಪಾತ್ರವನ್ನು ವಹಿಸಿದೆ. ಕನ್ನಡ ಕಾದಂಬರಿಯ ಆರಂಭದ ದಿನಗಳಲ್ಲಿ ದೇಶದಲ್ಲಿ ಆಗತಾನೇ ಹೊಳೆಯುತ್ತಿದ್ದ ದೇಶಾಭಿಮಾನ, ಸ್ವಾತಂತ್ರ್ಯಕ್ಕಾಗಿ ಜನರ ಹಪಾಹಪಿ, ಬ್ರಿಟಿಷ್ ಆಡಳಿತದ ವಿರುದ್ಧದ ಧಿಕ್ಕಾರ ಇತ್ಯಾದಿಗಳನ್ನು ಘೋಷಿಸುವ ಹಾಗೂ ಉತ್ತೇಜಿಸುವ ಕೆಲಸವನ್ನು ಲೇಖಕರು ತಮ್ಮ ಬರವಣಿಗೆಯ ಮೂಲಕ ಮಾಡಿದ್ದಾರೆ. ಸ್ವಾತಂತ್ರ್ಯ ಚಳುವಳಿಯ ಕಥಾನಕವನ್ನು ಕಟ್ಟಿಕೊಡುವ ಬಹುತೇಕ ಕಾದಂಬರಿಗಳು ಗಾಂಧಿಯವರ ಹೋರಾಟದ ಮಾರ್ಗವನ್ನು ಅಥವಾ ಅವರ ತತ್ವಾದರ್ಶಗಳ ಹಿನ್ನೆಲೆಯಲ್ಲಿ ಆ ದಿನಗಳನ್ನು ನೆನಪಿಗೆ ತರುತ್ತದೆ.

ಗಾಂಧಿಯವರ ಪ್ರೇರಣೆ–ಪ್ರಭಾವದಿಂದ ರಚಿಸಲ್ಪಟ್ಟ ಕೆಲವು ಕಾದಂಬರಿಗಳು ಗಾಂಧಿಯವರ ವಿಚಾರಗಳನ್ನು ಪ್ರಧಾನ ನೆಲೆಯಲ್ಲಿ ಚರ್ಚಿಸಿದರೆ, ಇನ್ನು ಕೆಲವು ಕಾದಂಬರಿಗಳು ಕತೆಯ ನಿರೂಪಣೆಯಲ್ಲಿಯೇ ಗಾಂಧಿಯವರ ತತ್ವಾದರ್ಶ ಗಳನ್ನು ಪ್ರತಿಫಲಿಸುತ್ತವೆ. ಒಟ್ಟಿನಲ್ಲಿ ದೇಶದ ಪೂರ್ಣ ಪ್ರಮಾಣದ ಪ್ರಗತಿಯನ್ನೂ ಎಲ್ಲಾ ನೆಲೆಯ ಸಮಾಜ ಸುಧಾರಣೆಯನ್ನೂ ಮುನ್ನೆಲೆಯಲ್ಲಿ ಇಟ್ಟುಕೊಂಡು ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಗಾಂಧಿಯವರ ವ್ಯಕ್ತಿತ್ವ ಕರಾವಳಿ ಕರ್ನಾಟಕದ ಮೇಲೆ ಬೀರಿದಂತಹ ಪ್ರಭಾವವನ್ನು ಹಿನ್ನೆಲೆಯಾಗಿರಿಸಿಕೊಂಡ ಎರಡು ಕಾದಂಬರಿಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗುವುದು.

ಭಾರತೀಯ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಗಾಂಧಿಯವರು ಕರಾವಳಿ ಪ್ರದೇಶಕ್ಕೆ ಮೂರು ಬಾರಿ ಭೇಟಿ ನೀಡಿದ್ದರು. ಇದರಿಂದಾಗಿ ಸಹಜವಾಗಿಯೇ ದಕ್ಷಿಣ ಕನ್ನಡ ಜಿಲ್ಲೆಯ ಜನರ ಮೇಲೆ ಗಾಂಧಿಯವರ ಪ್ರಭಾವ ತೀವ್ರತರವಾಗಿತ್ತು. ಈ ಹಿನ್ನೆಲೆಯನ್ನು ಇಟ್ಟುಕೊಂಡು ಎಚ್. ನಾಗವೇಣಿಯವರು ಗಾಂಧಿಯವರನ್ನು ಕೇಂದ್ರವಾಗಿ ಇರಿಸಿಕೊಂಡು ಕರಾವಳಿಯ ಜನತೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲು ಪಡೆದ ಬಗೆಯನ್ನು "ಗಾಂಧಿ ಬಂದ" ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಗಾಂಧಿಯವರ ಚಿಂತನೆಗಳಿಂದ ಪ್ರಭಾವಿತರಾದ ಹೋರಾಟಗಾರರು ತಮ್ಮ ತಮ್ಮ ಊರುಗಳಲ್ಲಿ ಗಾಂಧಿಯವರ ತತ್ವಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಾರೆ. ಕರಾವಳಿಯ ಭಾಗದಲ್ಲಿಯೇ ಸ್ವಾತಂತ್ರ್ಯ ಹೋರಾಟಗಾರರು ಗಾಂಧಿಯವರ ಆದೇಶದಂತೆ ಒಂದು ಬಗೆಯ ಸುಧಾರಣಾ ಚಳವಳಿಯನ್ನು ಆರಂಭಿಸಿದ್ದರು. ಚಳವಳಿಯ ಜೊತೆಜೊತೆಗೆ ಅಸ್ಪೃಶ್ಯತಾ ನಿವಾರಣೆ, ಸ್ತ್ರೀ ಸಮಾನತೆ, ಶಿಕ್ಷಣದಂತಹ ಸುಧಾರಣೆಗಳನ್ನು ಕರಾವಳಿಯಲ್ಲಿ ತರಲು ಪ್ರಯತ್ನಿಸಿದವರಲ್ಲಿ ಕಾರ್ನಾಡು ಸದಾಶಿವರಾಯರು, ಕುದ್ಮುಲ್ ರಂಗರಾಯರು ಪ್ರಮುಖರು. ಈ ನಿಟ್ಟಿನಲ್ಲಿ ಗಾಂಧಿಯವರು ಕರಾವಳಿಗೆ ಬಂದು ಇಲ್ಲಿನ ಸಾಮಾಜಿಕ ಪರಿಸರದಲ್ಲಾದ ಬದಲಾವಣೆಗಳನ್ನು 'ಗಾಂಧಿ ಬಂದ' ಕಾದಂಬರಿಯು ಕಟ್ಟಿಕೊಡುತ್ತದೆ.

ಕರಾವಳಿಗೆ ಬಂದ ಗಾಂಧಿಯವರು ತಮ್ಮ ಭಾಷಣದಲ್ಲಿ ಅಸಹಕಾರ ಚಳವಳಿ ಎಂಬ ಅಮೋಘ ಆಯುಧವನ್ನು ಸ್ವರಾಜ್ಯ ಗಳಿಸಲು ಹೇಗೆ ಬಳಸಬೇಕು ಎನ್ನುವುದನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡುತ್ತಾರೆ. "ಪರಂಗಿ ಸರಕಾರ ಕೊಡುವ ಬಿರುದನ್ನು ಆತ್ಮಾಭಿಮಾನವುಳ್ಳ ಪ್ರತಿಯೊಬ್ಬರೂ ತಿರಸ್ಕರಿಸಬೇಕು. ಈಗಾಗಲೇ ಅಂತಾ ಬಿರುದು ಪಡೆದಿರುವವರು ಅದನ್ನು ಸರಕಾರಕ್ಕೆ ಹಿಂದಿರುಗಿಸಬೇಕು. ಭಾರತೀಯರಿಗೆ ಎಂದೆಂದೂ ಪರಿಶುದ್ಧವಾದ ನ್ಯಾಯ ಕೊಡದ ಪರಂಗಿಯರ ಕೋರ್ಟುಗಳಿಗೆ ಬಹಿಷ್ಕಾರ ಹಾಕಬೇಕು. ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಅಥವಾ ಸರ್ಕಾರದಿಂದ ಹಣ ಪಡೆಯುವ ಶಾಲೆಗಳಿಗೆ ಕಳುಹಿಸಕೂಡದೆಂದು

ಅವರು ಮನವಿ ಮಾಡುತ್ತಾ ಅಸಹಕಾರ ಚಳುವಳಿ ಇಲ್ಲಿಂದಲೇ ಆರಂಭಿಸಬೇಕು" ಎಂದು ಕರೆ ಇತ್ತರು. ಸ್ವಾತಂತ್ರ್ಯ ಚಳುವಳಿಯ ದಿನಗಳಲ್ಲಿ ಗಾಂಧಿಯವರು ತಮ್ಮ ಭಾಷಣದಲ್ಲಿ ಹೇಳುತ್ತಿದ್ದ ವಿಚಾರಗಳೇ ಜನರಿಗೆ ಬ್ರಿಟಿಷ್ ಸರ್ಕಾರದ ವಿರುದ್ಧವಾಗಿ ಹೋರಾಡಲು ದಾರಿತೋರಿಸುತ್ತಿತ್ತು.

ಗಾಂಧಿಯವರ ಮೌಲ್ಯಗಳು ಕರಾವಳಿಯನ್ನು ಪ್ರವೇಶಿಸಿದಾಗ ಅದಾಗಲೇ ಇದ್ದಂತಹ ಜಾತಿಯಾಧಾರಿತ, ಧರ್ಮಾಧಾರಿತ ಸ್ಪರ್ಶ್ಯ ಅಸ್ಪಶ್ಯ ಎನ್ನುವ ಜಡ ಮನಸ್ಥಿತಿಗಳು ನಿಧಾನವಾಗಿ ಕಳಚಿ ಬೀಳುತ್ತವೆ. ಮಾರಪ್ಪನು ಗಾಂಧಿಯವರ ತತ್ವಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಬಹಳಷ್ಟು ಶ್ರಮವಹಿಸುತ್ತಾನೆ. ಮನೆಬಿಟ್ಟು ಊರೂರು ತಿರುಗುತ್ತಾ ಜನರಿಗೆ ದೇಶಸೇವೆ, ಪಾನ ನಿರೋಧ, ಖಾದೀ ಪ್ರಚಾರ, ಅಹಿಂಸೆ, ಸತ್ಯಾಗ್ರಹ, ಅಂತರ್ಜಾತಿ ವಿವಾಹ, ವಿಧವಾ ವಿವಾಹದಂತಹ ವಿಚಾರಗಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುತ್ತಾನೆ. ಗಾಂಧಿ ಮೌಲ್ಯಗಳನ್ನು ಜನರಿಗೆ ಪ್ರಸಾರ ಮಾಡುವಲ್ಲಿ ಕಾರ್ನಾಡು ಸದಾಶಿವರಾಯರೂ ಸಂಪೂರ್ಣವಾಗಿ ತಲ್ಲೀನರು. "ಆ ಪುಣ್ಯಾತ್ಮ ಸಿರಿವಂತರಲ್ಲಿ ಸಿರಿವಂತನಂತೆ. ಗಾಂಧಿಯವರ ಹಾದಿ ತುಳಿಯಲು ಇಡೀ ಸಿರಿವಂತಿಕೆಯನ್ನು ಬಿಟ್ಟುಕೊಟ್ಟರಂತೆ. ಕೊರಗರು ಮತ್ತೊಂದು ಬೇರೆಯವರ ಎಂಜಲೆಲೆ ಮುಟ್ಟಬಾರದು ಎಂದು ಆಗ ಹಾಕಿಸಿದರಂತೆ. ಅವರನ್ನು ತಮ್ಮವರೆಂಬಂತೆ ಕೈ ಹಿಡಿದು ತಮ್ಮ ಮನೆಯೊಳಗೆ ಕರೆದೊಯ್ದು ಜೊತೆಯಲ್ಲಿ ಊಟ ಮಾಡಿಸಿದಂತೆ" ಎನ್ನುವಲ್ಲಿ ಗಾಂಧೀ ಚಿಂತನೆಗಳು ಸಾಮಾಜಿಕವಾಗಿ ಜನರ ಬದುಕಿನ ಮೇಲೆ ಬೀರಿರುವ ಪ್ರಭಾವವನ್ನು ಕಾಣಬಹುದಾಗಿದೆ. ಗಾಂಧಿಯವರ ಹೋರಾಟದ ಫಲವಾಗಿ ಸಮಾಜದಿಂದ ದೂರಕ್ಕೆ ತಳ್ಳಲ್ಪಟ್ಟ ಜನವರ್ಗವೂ ಎಲ್ಲರಂತೆ ಸಾಮಾಜಿಕವಾಗಿ ಸಮಾನತೆಯನ್ನು ಪಡೆಯುವುದು ಸಾಧ್ಯವಾಗುತ್ತದೆ.

ಗಾಂಧಿಯವರು ಸಾರಿದ ಸಾಮಾಜಿಕ ಮೌಲ್ಯಗಳಲ್ಲಿ ಒಂದಾದ ವಿಧವಾ ವಿವಾಹವು ಕಾದಂಬರಿಯಲ್ಲಿ ಅದ್ರಾಮ–ದ್ರೌಪದಿಯರ ವಿವಾಹದೊಂದಿಗೆ ಪೂರ್ಣರೂಪವನ್ನು ಪಡೆದುಕೊಳ್ಳುತ್ತದೆ. ಗಾಂಧಿಯವರು ಸಾರಿದ ಹಿಂದೂ ಮುಸ್ಲಿಂ ಸಾಮರಸ್ಯ, ಹೆಣ್ಣಿನ ಕುರಿತಾದ ಗೌರವ, ಧರ್ಮಕ್ಕಿಂತ ಗೌರವದ ಬದುಕು ಮುಖ್ಯ ಎಂಬಿತ್ಯಾದಿ ಮೌಲ್ಯಗಳು ಅದ್ರಾಮ – ದ್ರೌಪದಿಯರ ಪ್ರೇಮಕಥೆಯ ಮೂಲಕ ಅಭಿವ್ಯಕ್ತವಾಗುತ್ತದೆ. ಜಾತಿ–ಮತದ ಗೋಡೆಯುರುಳಿಸಲು ಗಾಂಧಿಯವರು ಹಗಳಿರುಳೂ ನಿದ್ದೆಗೆಡುತ್ತಿದ್ದಾರೆ ಎನ್ನುವ ಮಾತು ಗಾಂಧಿಯವರು ಪ್ರತಿಪಾದಿಸಿದ ಜಾತ್ಯತೀತತೆಯ ತತ್ವವನ್ನು ಎತ್ತಿಹಿಡಿದಿದೆ. ಗಾಂಧಿಯವರನ್ನು ನೋಡಲೆಂದು ಕೊರಗರು ಕೂಳೂರು ನದಿ ದಾಟಲು ದೋಣಿ ಕಾಯುತ್ತಿರಬೇಕಾದರೆ, ಅಂಬಿಗರ ದೂಮ ಜಾತಿಯ ಚೌಕಾಸಿ ಮಾಡುತ್ತಾನೆ. ಆಗ ಪೂವ ಮರಕಾಲನು "ಎಲ್ಲರ ಮೈಯಲ್ಲೂ ಒಂದೇ ತರದ ನೆತ್ತರು ಹರಿಯುದಂತಾ ಗಾಂಧಿಯವರು ಹೇಳಿಲ್ಲವೇನೋ" ಎಂದು ಅಬ್ಬರಿಸುತ್ತಾನೆ. ಇಲ್ಲಿ ಗಾಂಧೀ ಮೌಲ್ಯದಿಂದಾಗಿ ಜಾತಿ ತಾರತಮ್ಯದ ಆಲೋಚನೆಯಲ್ಲಾದ ಬದಲಾವಣೆಯನ್ನು ಗುರುತಿಸಬಹುದು. ಈ ಬದಲಾವಣೆ ಗಾಂಧೀ ಚಿಂತನೆಗಳೇ ಪ್ರಧಾನ ಪ್ರೇರಣೆ ಎನ್ನಬಹುದು.

ಸುಂದರಿಯಾಗಿದ್ದರೂ ಗರ್ಭಕೋಶವೇ ಮೊಳೆಯದೆ ಬಂಜೆ ಎಂದು ಸಮಾಜದ ಟೀಕೆಗಳಿಗೆ ಗುರಿಯಾದವಳು ದಾರು. ಇದೇ ಕಾರಣದಿಂದಾಗಿ ಆಕೆಯ ತಾಯಿ ಆತ್ಮಹತ್ಯೆಯನ್ನು ಕೈಗೊಳ್ಳುತ್ತಾರೆ. ಇಂತಹ ದೀನ ಸ್ಥಿತಿಯಿಂದ ಆಕೆಯನ್ನು ಮೇಲೆತ್ತಲು ಸದಾ ಗಾಂಧೀ ಆದರ್ಶಗಳೊಂದಿಗೆ ಕ್ರಾಂತಿಯಲ್ಲಿ ತೊಡಗಿಸಿಕೊಂಡ ಮಾರಪ್ಪನು ಮುಂದಾಗುತ್ತಾನೆ. ಮಾರಪ್ಪನು ದಾರುವನ್ನು ವಿವಾಹವಾಗುವ ಮೂಲಕ ಗಾಂಧಿಯವರು ಹೇಳಿದ ಅನಿಷ್ಟ ನಿರ್ಮೂಲನೆಯ ತತ್ವವನ್ನು ಅನುಷ್ಠಾನಕ್ಕೆ ತರುತ್ತಾನೆ.

ಗಾಂಧಿಯವರು ಕರಾವಳಿಗೆ ಬಂದಾಗ ಗಾಂಧಿ ನಿಧಿಗೆ ಕೆಲಸದಾಳುಗಳಿಂದ ತೊಡಗಿ ಗುತ್ತಿನ ಶೆಟ್ಟರವರೆಗೆ ಎಲ್ಲರೂ ತಮ್ಮ ಶಕ್ತ್ಯಾನುಸಾರ

ದೇಣಿಗೆಯನ್ನು ನೀಡುತ್ತಾರೆ. ಇದು ಜನರಿಗೆ ಗಾಂಧಿಯವರ ಬಗೆಗಿದ್ದ ಭರವಸೆ, ನಿಷ್ಠೆ ಹಾಗೂ ಗೌರವವನ್ನು ತೋರಿಸುತ್ತದೆ. ಗಾಂಧಿಯವರ ಖಾದೀ ಪ್ರಚಾರದಿಂದಾಗಿ ಪ್ರತಿಷ್ಠೆಗೆ ಹೆಸರಾದ ಗುತ್ತಿನ ಹೆಂಗಸರೂ ರೇಷ್ಮೆ ಸೀರೆ ತ್ಯಜಿಸಿ ಖಾದಿ ಸೀರೆ ಉಟ್ಟುಕೊಳ್ಳುತ್ತಾರೆ. ಚರಕದಿಂದ ತಾನೇ ನೂತ ಸೀರೆಗಳನ್ನು ಗಾಂಧಿ ನಿಧಿಗೆ ದ್ರೌಪದಿ ಹಾಗೂ ದಾರು ಅರ್ಪಿಸುತ್ತಾರೆ. ಹೀಗೆ ಕರಾವಳಿ ಪ್ರದೇಶದ ಜನರಲ್ಲಿ ಗಾಂಧಿಯವರ ಆಗಮನ ಮೂಡಿಸಿದ ಸಂಚಲನ ಮತ್ತು ಪರಿವರ್ತನೆಯನ್ನು ಗಾಂಧಿ ಬಂದ ಕಾದಂಬರಿಯು ಎಳೆಎಳೆಯಾಗಿ ಚಿತ್ರಿಸುವ ಪ್ರಯತ್ನವನ್ನು ಮಾಡಿದೆ.

ಕರಾವಳಿ ಕರ್ನಾಟಕದ ಗಾಂಧಿ ಹೋರಾಟವನ್ನು ಕಟ್ಟಿಕೊಡುವ ಮತ್ತೊಂದು ಕಾದಂಬರಿ ನಾ. ಮೊಗಸಾಲೆಯವರ ಉಲ್ಲಂಘನೆ. ಈ ಕಾದಂಬರಿಯು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದಲ್ಲಾದ ರಾಜಕೀಯ, ಸಾಮಾಜಿಕ, ಆರ್ಥಿಕ ಜೊತೆಗೆ ಸಾಂಸ್ಕೃತಿಕ ಕ್ಷೇತ್ರದಲ್ಲಾದ ಪಲ್ಲಟಗಳಿಗೆ ಸಾಕ್ಷಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟರ ಗುತ್ತಿನ ಮನೆತನದ ಸುತ್ತ ಹೆಣೆಯಲ್ಪಟ್ಟ ಕಥೆಯಾದರೂ ತುಳುನಾಡಿನ ಇಡೀ ಸಮಾಜದ ಸಂಕಥನವನ್ನು ಕಟ್ಟಿಕೊಡುವಲ್ಲಿ ಕಾದಂಬರಿಯು ಯಶಸ್ವಿಯಾಗಿದೆ. ಕಾದಂಬರಿಯಲ್ಲಿ ಬರುವ ಸಂಕಪ್ಪ ಹೆಗ್ಡೆಯವರ ಪಾತ್ರವು ಗಾಂಧಿ ತತ್ವಕ್ಕೆ ನಿಷ್ಠೆಯಿಂದ ಬದುಕಿ ಪ್ರಾಮಾಣಿಕತೆಯನ್ನು ಮೆರೆದು ವಿಶೇಷ ಪಾತ್ರವಾಗಿ ಗುರುತಿಸಲ್ಪಡುತ್ತದೆ. ಆಂಗ್ಲರನ್ನು ಭಾರತದಿಂದ ಓಡಿಸಲು ಗಾಂಧಿಯವರ ಅಹಿಂಸೆಯ ಮಾರ್ಗವೊಂದೇ ಸಫಲವಾಗಿತ್ತು. ಹಿಂಸೆ, ಭಯೋತ್ಪಾದನೆಗಳಿಂದ ಆಗದ ಕೆಲಸವನ್ನು ಸತ್ಯ, ಶಾಂತಿ, ಅಹಿಂಸೆಯು ಹೋರಾಟವು ತನ್ನದಾಗಿಸಿಕೊಂಡಿತ್ತು. ಕೇವಲ ತುಂಡು ಬಟ್ಟೆ ಉಟ್ಟುಕೊಂಡು ಬರೀ ಕಾಲ ನಡಿಗೆಯಲ್ಲಿ ಭಾರತದಾದ್ಯಂತ ಸಂಚರಿಸಿ ಜನರಲ್ಲಿ ದೇಶ ಪ್ರೇಮವನ್ನು ಮೂಡಿಸಿದ ಕಾರ್ಯ ಸಾಮಾನ್ಯವಾದುದೇನಲ್ಲ. ಅಂತಹ ಸಾಧನೆ ಮಾಡಿದ ಗಾಂಧಿ ಮಾರ್ಗವನ್ನು ಭಾರತದಲ್ಲಿ ಅನೇಕರು ಅನುಸರಿಸಿದ್ದಾರೆ. ಜೊತೆಗೆ ಅವರ ತತ್ವಗಳನ್ನು ಪಾಲಿಸಿದ್ದಾರೆ. ದೇಶಪ್ರೇಮದ ಕಿಚ್ಚಿನ ಮೂಲಕ ತನ್ನ ಹೃದಯ ಕಮಲವನ್ನು ಶುದ್ಧಮಾಡಿಕೊಂಡಿದ್ದಾರೆ. ತಾಳ್ಮೆ, ಸಹನೆ, ಪ್ರೀತಿಯ ಮೂಲಕ ಜನರ ಮನಸ್ಸನ್ನು ಗೆದ್ದವರಿದ್ದಾರೆ. ಅಂತಹ ವ್ಯಕ್ತಿಗಳ ಜೀವನಶೈಲಿ ಗುಣವಿಶೇಷಣಗಳು ಸಂಕಪ್ಪ ಹೆಗ್ಡೆ ಪಾತ್ರದಲ್ಲಿ ಪರಕಾಯ ಪ್ರವೇಶ ಆಗಿರುವುದಂತೂ ಸತ್ಯ.

ಕಾಲೇಜು ಶಿಕ್ಷಣಕ್ಕಾಗಿ ತಮ್ಮ ಹುಟ್ಟೂರನ್ನು ಬಿಟ್ಟು ಮುಂಬಯಿಗೆ ತೆರಳಿದ ಸಂಕಪ್ಪ ಹೆಗ್ಡೆಯವರು ವ್ಯಾಸಂಗವನ್ನು ಪೂರ್ಣಗೊಳಿಸಿರುತ್ತಿದ್ದರೆ ಗುತ್ತಿನಮನೆಯ ಮೊದಲ ಪದವೀಧರ ಎನಿಸಿಕೊಳ್ಳುತ್ತಿದ್ದರು. ಆದರೆ ಗಾಂಧಿಯವರ ಭಾಷಣಗಳಿಂದ ಪ್ರೇರಣೆಗೊಂಡ ಸಂಕಪ್ಪ ಹೆಗ್ಡೆಯವರು ತನ್ನ ವಿದ್ಯಾಭ್ಯಾಸವನ್ನು ತೊರೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲು ಪಡೆಯುತ್ತಾರೆ. ಹಾಗೂ ಅಪ್ಪಟ ಗಾಂಧಿವಾದಿಯಾಗಿ ಬಿಡುತ್ತಾರೆ. “ಕಾಲೇಜಿಗೆ ಹೋಗುತ್ತಿದ್ದ ಸಂಕಪ್ಪನಿಗೆ ಓದಿಗಿಂತಲೂ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಗಾಂಧೀಜಿಯ ಬರಹಗಳನ್ನು ಓದುವುದರಲ್ಲಿ ಹೆಚ್ಚು ಆಸಕ್ತಿ ಹುಟ್ಟಿತ್ತು. ಗಾಂಧೀಜಿಯ ಸ್ವಾತಂತ್ರ್ಯದ ಪರಿಕಲ್ಪನೆ ಅವನ ಅಂತರಂಗವನ್ನು ತಟ್ಟಿ, ಸ್ವಾತಂತ್ರ್ಯ ಇಲ್ಲದ ಈ ದೇಶದಲ್ಲಿ ಓದಿ ಬ್ರಿಟಿಷರ ಚಾಕರಿ ಮಾಡುವುದು ಅಂದರೆ ಹಾಸ್ಯದ ಸಂಕೇತ ಎನಿಸತೊಡಗಿತ್ತು. ಸರಕಾರ ನೀಡಿದ ಪರೇಲಿಕೆಯನ್ನೂ ಗುತ್ತುನ ಮನೆ ತೊರೆಯುವುದು ಅಗತ್ಯ ಎಂದೂ ಅವನಿಗೆ ಕಂಡಿತ್ತು” ಈ ಸಾಲುಗಳು ಸ್ವಾತಂತ್ರ್ಯಪೂರ್ವದಲ್ಲಿ ವಿದ್ಯಾರ್ಥಿ ಸಮುದಾಯದ ಮೇಲೆ ಗಾಂಧಿಯವರ ಚಿಂತನೆಗಳ ಪ್ರಭಾವ ಹೇಗೆ ಕೆಲಸ ಮಾಡುತ್ತಿತ್ತು ಎನ್ನುವುದರ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

ಗಾಂಧಿ ಚಳವಳಿಯಲ್ಲಿ ಭಾಗವಹಿಸುವುದಕ್ಕಾಗಿ ತಾನು ಓದನ್ನು ಮುಂದುವರಿಸುವುದಿಲ್ಲ ಎಂದಾಗ

ಸಂಕಪ್ಪ ಹೆಗ್ಡೆಯವರ ಮಾವ ಶೀನಪ್ಪ ಹೆಗ್ಡೆಯವರು ಮನಸ್ಸಿನಲ್ಲಿ ಈ ರೀತಿಯಾಗಿ ಆಲೋಚಿಸುತ್ತಾರೆ– "ಬ್ರಿಟಿಷ್ ಅಧಿಕಾರಿಗಳ ದಂಡನೇ ಕೈಯಲ್ಲೊಂದು ಬಡಿಗೆಯೂ ಇಲ್ಲದೇ ನಡುಗಿಸಬೇಕಾದರೆ ಅಹಿಂಸೆ ಸತ್ಯಾಗ್ರಹ ಎಂದೆಲ್ಲಾ ಹೇಳಿ ಈ ಸಂಕಪ್ಪನಂಥ ಸಾವಿರಾರು ವಿದ್ಯಾರ್ಥಿಗಳಲ್ಲಿ ಹೆತ್ತವರ ಪ್ರೀತಿಯನ್ನೂ ಮೀರಿಸಿ ಚಳುವಳಿಯ ಹುಚ್ಚಿನ ಕಿಚ್ಚನ್ನು ಗಾಂಧೀಜಿ ಹಚ್ಚಬೇಕಾದರೆ, ಗಾಂಧಿ ಮನುಷ್ಯನಲ್ಲ!" ಈ ರೀತಿಯಾಗಿ ಕಾದಂಬರಿಯಲ್ಲಿ ಗಾಂಧಿಯವರು ಕೇವಲ ಹೋರಾಟಗಾರ ಮಾತ್ರವಲ್ಲ ಅವರೊಂದಿಗೆ ಅಪೂರ್ವವಾದ ಶಕ್ತಿ' ಎಂಬಂತೆ ಗೋಚರಿಸುತ್ತಾರೆ. 'ಗಾಂಧಿಯನ್ನು ಈಗಾಗಲೇ ಮಹಾತ್ಮಾ ಗಾಂಧೀ ಬ್ರಿಟಿಷರೇ ಒಪ್ಪಿಕೊಂಡಿದ್ದಾರೆ' ಎನ್ನುವ ಕೂಚಣ್ಣ ರೈಗಳ ಮಾತು ಸ್ವಾತಂತ್ರ್ಯಪೂರ್ವದಲ್ಲಿ ಗಾಂಧಿಯವರ ವಿಚಾರಗಳು, ಹೋರಾಟದ ತಾತ್ವಿಕತೆಗಳು ಬ್ರಿಟಿಷ್ ಸರ್ಕಾರವನ್ನೇ ಬೆರಗುಗೊಳಿಸಿತ್ತು ಎನ್ನುವುದನ್ನು ಸೂಚಿಸುತ್ತದೆ.

"ದೇಶದ ಸ್ವಾತಂತ್ರ್ಯ ಅಂದರೆ ರಾಜಕೀಯ ಸ್ವಾತಂತ್ರ್ಯ ಎಂದು ಮಾತ್ರ ಅರ್ಥವಲ್ಲ. ಅಸ್ಪೃಶ್ಯತೆ, ಅಸಮಾನತೆ, ಶೋಷಣೆಗಳಿಲ್ಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಕ್ಕುಗಳನ್ನು ಪಡೆಯುವುದೇ ನಿಜವಾದ ಸ್ವಾತಂತ್ರ್ಯದ ಅರ್ಥ" ಎನ್ನುವ ಗಾಂಧಿಯವರ ಭಾಷಣವನ್ನು ಕೇಳಿ ಅವರ ಪ್ರಭಾವ ವಲಯಕ್ಕೆ ಒಳಗಾದ ಸಂಕಪ್ಪ ಹೆಗ್ಡೆಯವರು ಗಾಂಧಿಯವರ ಹಿಂದೆಯೇ ತಾವೂ ಹೋಗಬೇಕು" ಎಂದು ತೀರ್ಮಾನಿಸುತ್ತಾರೆ. ಹಾಗೂ ತಮ್ಮ ತಾಯಿಯವರಿಂದ ನೂರು ರೂಪಾಯಿಯನ್ನು ಕೇಳಿ ಪಡೆದು ಊರನ್ನು ಬಿಟ್ಟು ಮುಂಬಯಿಯಲ್ಲಿ ಇದ್ದುಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಗಾಂಧಿಯವರ ಆದರ್ಶಗಳನ್ನು ಆರಾಧಿಸುತ್ತಾ, ಅವನ್ನೇ ತನ್ನ ಬದುಕಿನ ಧ್ಯೇಯವನ್ನಾಗಿಸಿದ ಸಂಕಪ್ಪ ಹೆಗ್ಡೆಯವರನ್ನು ಊರಿನ ಜನರು 'ಗಾಂಧಿ ಹೆಗ್ಗಡೆ' ಎಂದೋ 'ಗಾಂಧಿ ಸಂಕಪ್ಪಣ್ಣ' ಎಂದೋ ಕರೆಯುತ್ತಿದ್ದರು. ಗಾಂಧಿಯವರ ಮಾತಿನಂತೆ ಸ್ವಾತಂತ್ರ್ಯ ಎಂದರೆ ಮೊದಲು ಸಮಾನತೆ, ಹಾಗಾಗಿ ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸ್ ಸರಕಾರವು 'ಉಳುವವನೇ ಹೊಲದೊಡೆಯ' ಎನ್ನುವ ಭೂಮಸೂದೆ ಕಾಯ್ದೆಯನ್ನು ಜಾರಿಗೊಳಿಸಿದ ಸಂದರ್ಭದಲ್ಲಿ ಸಂಕಪ್ಪ ಹೆಗ್ಡೆಯವರು ಇತರರಂತೆ ತಮ್ಮ ಗುತ್ತಿನ ಭೂಮಿ ಹೋದುದಕ್ಕೆ ದುಃಖಿಸದೆ ಒಕ್ಕಲು ಮಕ್ಕಳ ಪರವಾಗಿ ನಿಲ್ಲುತ್ತಾರೆ. 'ತಲೆತಲಾಂತರದಿಂದ ಅವರು ಬೆವರು ಸುರಿಸಿ ನಮ್ಮ ಗುತ್ತಿನಮನೆ ಉಳಿಸಿದ್ದಾರೆ. ಈಗಲಾದರೂ ಅವರು ಸ್ವತಂತ್ರವಾಗಿ ಬಾಳಿ ಬದುಕಲಿ' ಎನ್ನುವುದರ ಜೊತೆಗೆ ಒಕ್ಕಲಿನವರು ಗುತ್ತಿಗೆಮನೆ ಚಾವಡಿಗೆ ಬರಬೇಕು, ಹಾಗೂ ಗುತ್ತಿನವರು ಊಟಕ್ಕೆ ಕುಳಿತುಕೊಳ್ಳುವಲ್ಲಿಗೇ ಕರೆದು ಊಟಕ್ಕೆ ಕೂರಿಸಬೇಕು ಎಂಬುದಾಗಿ ಸಂಕಪ್ಪ ಹೆಗ್ಡೆಯವರು ಆಗ್ರಹಿಸುತ್ತಾರೆ. 'ಉಳುವವನೇ ಹೊಲದೊಡೆಯ' ಎನ್ನುವುದು ಗಾಂಧಿಯವರ ಗ್ರಾಮ ಸ್ವರಾಜ್ಯದ ಮೂಲ ಪರಿಕಲ್ಪನೆಗಳಲ್ಲಿ ಒಂದು. ಇದು ಗಾಂಧಿಯವರ 'ಅಧಿಕಾರ ವಿಕೇಂದ್ರಿಕರಣ' ಪರಿಕಲ್ಪನೆಯ ಮೊದಲನೆಯ ಹೆಜ್ಜೆ ಎನ್ನುವುದನ್ನು ಲೇಖಕರು ಸಂಕಪ್ಪ ಹೆಗ್ಡೆ ಪಾತ್ರದ ಮುಖೇನ ಹೇಳುವ ಪ್ರಯತ್ನ ಮಾಡಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಸಂಕಪ್ಪ ಹೆಗ್ಡೆಯವರ ಜೊತೆಯಾಗಿದ್ದ ಕಾಂತಪ್ಪ ಎಂಬಾತ ಬೆಂಗಳೂರಿನ ಶಾಸಕ ಸ್ಥಾನವನ್ನೂ ಹಾಗೂ ಬಾಲಕೃಷ್ಣ ಎಂಬಾತ ರಾಷ್ಟ್ರೀಕರಿಸಿದ ಬ್ಯಾಂಕೊಂದರ ಅಧ್ಯಕ್ಷ ಸ್ಥಾನವನ್ನೂ ಸ್ವಾತಂತ್ರ್ಯೋತ್ತರದಲ್ಲಿ ಪಡೆದುಕೊಂಡಿದ್ದರು. ಆದರೆ ಸಂಕಪ್ಪ ಹೆಗ್ಡೆ ಮಾತ್ರ ಯಾವುದೇ ಅಧಿಕಾರ ಸ್ಥಾನದ ಜನ್ಮ ಹತ್ತಲಿಲ್ಲ. ಈ ಕುರಿತಾಗಿ ಅಳಿಯ ಸುಂದರನು ಪ್ರಶ್ನಿಸಿದಾಗ, ಅವರ ಪ್ರತಿಕ್ರಿಯೆ ಹೀಗಿತ್ತು. "ಗಾಂಧೀಜಿ ಸ್ವರಾಜ್ಯಕ್ಕಾಗಿ ಹೋರಾಡಿದ್ದು ಅಧಿಕಾರದ ಆಸೆಗಲ್ಲ. ಸ್ವಾತಂತ್ರ್ಯ ಜನ್ಮ ಸಿದ್ದ ಹಕ್ಕು ಎಂಬುದನ್ನು ನಾವು ಅರ್ಥ ಮಾಡಿಕೊಂಡು ಬಾಳಬೇಕೆಂಬುದಕ್ಕಾಗಿ". ಹೀಗೆ ಯಾವುದೇ ಅಧಿಕಾರದ ಲಾಲಸೆಯಿಲ್ಲದೆ ಪ್ರಾಮಾಣಿಕವಾಗಿ ದೇಶಸೇವೆ ಮಾಡಬಯಸಿದ

ಸಂಕಪ್ಪ ಹೆಗ್ಡೆಯವರು ಸ್ವಾತಂತ್ರ್ಯೋತ್ತರದಲ್ಲಿ ಗಾಂಧಿಯವರ ಧ್ಯೇಯೋದ್ದೇಶಗಳನ್ನು ಪ್ರತಿಪಾದಿಸಲು ಊರಿನಲ್ಲಿಯೇ ಗಾಂಧಿ ಪ್ರತಿಷ್ಠಾನವನ್ನು ಸ್ಥಾಪಿಸಿದರು.

ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದ ಅಳಿಯ ಸುಂದರನಲ್ಲಿ ಸಂಕಪ್ಪ ಹೆಗ್ಡೆಯವರು ಗಾಂಧಿಯವರು ಹೇಳಿದಂತಹ 'ಪಂಚಾಯತ್ ವ್ಯವಸ್ಥೆ' ಪರಿಕಲ್ಪನೆಯನ್ನು ಈ ರೀತಿಯಾಗಿ ವಿವರಿಸುತ್ತಾರೆ. "ಆಯಾ ಗ್ರಾಮದ ಅವಶ್ಯಕತೆಯನ್ನು ಆಯಾ ಗ್ರಾಮದ ಮಂದಿಯೇ ನಿರ್ಧರಿಸಬೇಕು ಎನ್ನುವವನು ನಾನು. ಇದುವೇ ಗಾಂಧೀಜಿಯ ರಾಜರಾಜ್ಯದ ಕನಸು. ಇದರಿಂದಾಗಿ ಪ್ರತಿಗ್ರಾಮದ ಸಂಸ್ಕೃತಿ, ಗುಡಿ ಕೈಗಾರಿಕೆಗಳು ಉಳಿಯಲು ಅಥವಾ ಉಳಿಸಲು ಸಾಧ್ಯ ಎಂದು ಗಾಂಧೀಜಿ ನಂಬಿದ್ದರು." ಆದರೆ ಸಂಕಪ್ಪ ಹೆಗ್ಡೆಯವರು ಹೇಳುವ ಗಾಂಧಿಯವರ ಯಾವ ಚಿಂತನೆಗಳೂ ಇಂದಿನ ಸಮಾಜಕ್ಕೆ ಪ್ರಾಕ್ಟಿಕಲ್ ಅಲ್ಲ ಎನ್ನುವುದು ಸುಂದರನ ತರ್ಕವಾಗಿತ್ತು. ಸಂಕಪ್ಪ ಹೆಗ್ಡೆಯವರಿಗೂ ಇಂದಿನ ಸರಕಾರ ಗಾಂಧಿಯವರ ಆಶಯಕ್ಕೆ ತದ್ವಿರುದ್ಧವಾದುದನೇ ಮಾಡುತ್ತಾ ಬಂದಿರುವುದರಿಂದ ರಾಮರಾಜ್ಯದ ಕನಸು ಮಾತ್ರವಲ್ಲ, ಸ್ವರಾಜ್ಯ ಸ್ಥಾಪನೆಯು ಕಷ್ಟ ಸಾಧ್ಯ ಎಂದೆನಿಸುವಂತಾಯಿತು. ಗಾಂಧಿಯವರ ಆದರ್ಶಗಳನ್ನು ಪಾಲಿಸುವ ನಿಷ್ಠಾವಂತ ಪ್ರತಿನಿಧಿಯಾಗಿ ಸಂಕಪ್ಪ ಹೆಗ್ಡೆಯವರು ಗೋಚರಿಸುತ್ತಾರೆ. ಲೇಖಕರು ಕಾದಂಬರಿಯಲ್ಲಿ ಸಂಕಪ್ಪ ಹೆಗ್ಡೆ ಪಾತ್ರದ ಮೂಲಕ ಸ್ವಾತಂತ್ರ್ಯ, ಸಮಾನತೆ, ಗ್ರಾಮ ಸ್ವರಾಜ್ಯ, ಪಂಚಾಯತ್ ವ್ಯವಸ್ಥೆ ಮೊದಲಾದ ಗಾಂಧಿಯವರ ಚಿಂತನೆಗಳಿಗೆ ವ್ಯಾಖ್ಯಾನವನ್ನು ನೀಡಿದ್ದಾರೆ.

**ಉಪಸಂಹಾರ**

ಒಟ್ಟಿನಲ್ಲಿ ಗಾಂಧಿಯವರ ಸ್ವಾತಂತ್ರ್ಯ ಹೋರಾಟವು ರಾಜಕೀಯ ಉದ್ದೇಶವನ್ನು ಮಾತ್ರವೇ ಇಟ್ಟುಕೊಳ್ಳದೆ ದೇಶದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯದ ಪ್ರಗತಿಯನ್ನೂ ಬಯಸಿದೆ. ಸಮಾಜದಲ್ಲಿ ಅದಾಗಲೇ ಇದ್ದಂತಹ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಅಸಮಾನತೆಯು ದೇಶದ ಒಗ್ಗಟ್ಟಿಗೆ ಕಂಟಕಪ್ರಾಯದಂತಿತ್ತು. ಇದನ್ನು ಅರಿತಿದ್ದ ಗಾಂಧಿಯವರು ದೇಶದ ಸಮಗ್ರ ಬೆಳವಣಿಗೆಯ ಹಿತದೃಷ್ಟಿಯಿಂದ ಎಲ್ಲಾ ನೆಲೆಯ ಅಸಮಾನತೆಗಳನ್ನು ಸಮಾಜದಿಂದ ಬೇರು ಸಮೇತವಾಗಿ ನಿರ್ಮೂಲನೆ ಮಾಡಲು ಪ್ರಯತ್ನಪಟ್ಟವರು. ಬಹಳಷ್ಟು ಮಂದಿ ಭಾರತೀಯರು ದೇಶದ ಸ್ವಾತಂತ್ರ್ಯಕ್ಕಾಗಿ ನೇರವಾಗಿ ಚಳವಳಿಗೆ ಇಳಿದರೆ, ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸುಶಿಕ್ಷಿತರೆನಿಸಿಕೊಂಡ ಕೆಲವರು ಗಾಂಧಿಯವರ ವಿಚಾರಗಳಿಗೆ ತಲೆದೂಗಿ ಸಮಾಜ ಸುಧಾರಣೆಯ ದಾರಿಯಲ್ಲಿ ನಡೆದು ದೇಶಸೇವೆಯಲ್ಲಿಯೇ ಮಗ್ನರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಈ ಎರಡು ಕಾದಂಬರಿಗಳು ಗಾಂಧಿಯವರ ಭೇಟಿಯು ಕರಾವಳಿ ಜನರ ಹೋರಾಟದ ಬದುಕಿಗೆ ತಾತ್ವಿಕ ಚೌಕಟ್ಟನ್ನು ನೀಡಿದ ಬಗೆಯನ್ನೂ ಹಾಗೂ ಕರಾವಳಿಯ ಸಾಂಸ್ಕೃತಿಕ ಬದುಕಿನ ಒಟ್ಟು ಚಿತ್ರಣವನ್ನು ಕಟ್ಟಿಕೊಡುವುದರ ಜೊತೆಗೆ ಗಾಂಧಿಯವರ ಆದರ್ಶಗಳಿಂದ ಪ್ರಭಾವಿತರಾದ ಕರಾವಳಿಯ ಜನತೆ ಸ್ವಾತಂತ್ರ್ಯ ಚಳುವಳಿಗೆ ನೀಡಿದಂತಹ ಕೊಡುಗೆಯನ್ನು ಸ್ಮರಿಸುವ ಕೆಲಸವನ್ನು ಮಾಡಿದೆ.

**ಪರಾಮರ್ಶನ ಗ್ರಂಥಗಳು**


- ಮೊಗಸಾಲೆ, ನಾ. (2008). ಉಲ್ಲಂಘನೆ. ಸುಮುಖ ಬುಕ್ ಹೌಸ್.
- ನಾಗವೇಣಿ, ಎಚ್. (2011). *ಗಾಂಧಿ ಬಂದ.* ಅಹರ್ನಿಶಿ ಪ್ರಕಾಶನ.
- ನೀಲಾವರ ಸುರೇಂದ್ರ ಅಡಿಗ. (2010). *ಉಲ್ಲಂಘನೆ:ಸೀಮೋಲ್ಲಂಘನ.* ರಜತ ಸಾಹಿತ್ಯ.
- ಶ್ರೀನಾಥ್. (2015). *ಗಾಂಧಿ ಬಂದ ಕಾದಂಬರಿಯ ಸಾಮಾಜಿಕ ಚಿತ್ರಣ* (ಅಪ್ರಕಟಿತ ಸಂಶೋಧನ ನಿಬಂಧ). ಕರ್ನಾಟಕ ಸಂಘ ಮಂಡ್ಯ.